## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 726 |
| 2 | ಸದಸ್ಯರ ಹೆಸರು | : ಶ್ರೀ ಎಂ ನಾಗರಾಜು (ವಿಧಾನ ಸಭಾ ಕ್ಷೇತ್ರ) |
| 3 | ಉತ್ತರಿಸಬೇಕಾದ ದಿನಾಂಕ | : 10.03.2026 |
| 4 | ಉತ್ತರಿಸುವವರು | : ಮಾನ್ಯ ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | 2025 ರಲ್ಲಿ ನಡೆದ ಚಳಿಗಾಲದ ಅಧಿವೇಶನದಲ್ಲಿ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 310 ರಲ್ಲಿ ಗಣಿ ಗುತ್ತಿಗೆ ಮಂಜೂರಾತಿ ನೀಡುವ ಪೂರ್ವದಲ್ಲಿ ಸಂಬಂಧಪಟ್ಟ ಇಲಾಖೆಗಳಿಂದ ದಾಖಲಾತಿಗಳನ್ನು ಪಡೆದ ನಂತರ ಕರಾರು ಒಪ್ಪಂದ ಜಾರಿ ಮಾಡಲಾಗುವುದು ಎಂದು ತಿಳಿಸಿದ್ದು ಮತ್ತು ಉದ್ದೇಶಿತ ಗಣಿ ಗುತ್ತಿಗೆ ಮಂಜೂರಾತಿ ಪ್ರದೇಶವು ಪುರಾತತ್ವ ಪರಂಪರೆಯ ತಾಣದ ವ್ಯಾಪ್ತಿಗೆ ಒಳಪಡುತ್ತಿದ್ದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯ / ಪುರಾತತ್ವ ಇಲಾಖೆಯ ನಿಯಮಗಳಂತೆ ನಿರ್ದಿಷ್ಟ ಪ್ರದೇಶವನ್ನು ಹೊರತುಪಡಿಸಿ ಗಣಿಗಾರಿಕೆಗೆ ಅನುಮತಿ ನೀಡಲಾಗುವುದು ಎಂದು ತಿಳಿಸಲಾಗಿರುತ್ತದೆ. ಆದರೆ 2025 ನೇ ಸಾಲಿನಲ್ಲಿಯೇ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ವತಿಯಿಂದ ಬಳ್ಳಾರಿ ಜಿಲ್ಲೆಯ ಸಂಡೂರು ಪ್ರದೇಶದ ಸುಮಾರು 1,200 ವರ್ಷಗಳಷ್ಟು ಹಳೆಯದಾಸ ಕುಮಾರಸ್ವಾಮಿ ದೇವಾಲಯದ ಬಳಿ ಗಣಿ ಗುತ್ತಿಗೆದಾರರಿಂದ ವಿಸ್ಫೋಟ ಕಾರ್ಯ ಕೈಗೊಂಡಿರುವ ಬಗ್ಗೆ ಕಳವಳ ವ್ಯಕ್ತಪಡಿಸಿದ್ದು, ಇದು ಸರ್ಕಾರದ ಗಮನಕ್ಕೆ ಬಂದಿದೆಯೇ; | 2025ನೇ ಸಾಲಿನಲ್ಲಿಯೇ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (NGT) ವತಿಯಿಂದ ಬಳ್ಳಾರಿ ಜಿಲ್ಲೆಯ ಸಂಡೂರು ಪ್ರದೇಶದ ಸುಮಾರು 1200 ವರ್ಷಗಳಷ್ಟು ಹಳೆಯದಾದ ಕುಮಾರಸ್ವಾಮಿ ದೇವಾಲಯದ ಬಳಿ ಗಣಿ ಗುತ್ತಿಗೆದಾರರಿಂದ ವಿಸ್ಫೋಟ ಕಾರ್ಯವನ್ನು ಕೈಗೊಂಡಿರುವ ಬಗ್ಗೆ ಕಳವಳ ವ್ಯಕ್ತಪಡಿಸಿದ್ದು, ಇದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| (ಆ) | ಬಂದಿದ್ದಲ್ಲಿ, ಈ ವಿಸ್ಫೋಟ (explosion) ಕಾರ್ಯ ಕೈಗೊಳ್ಳಲು ಸರ್ಕಾರದ ವತಿಯಿಂದ ಅನುಮತಿ ನೀಡಲಾಗಿದೆಯೇ; ಇಲ್ಲದಿದ್ದಲ್ಲಿ ಗಣಿಗುತ್ತಿಗೆದಾರರು ಯಾವ ಅನುಮತಿಯೊಂದಿಗೆ ಈ ಪ್ರದೇಶದಲ್ಲಿ ವಿಸ್ಫೋಟ ಕಾರ್ಯ ಕೈಗೊಂಡಿತ್ತು; (ಮಾಹಿತಿ ನೀಡುವುದು) | ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಮೆ॥ JSW Steels ರವರು ಹರಾಜಿನಲ್ಲಿ ಪಡೆದ 'ಸಿ' ವರ್ಗದ ಗಣಿ ಗುತ್ತಿಗೆ (M/s.Hothur Traders.) ಪ್ರಕರಣದಲ್ಲಿ ಗುತ್ತಿಗೆದಾರರು ನಿಯಮಾನುಸಾರ ಶಾಸನಬದ್ಧ ಎಲ್ಲಾ ದಾಖಲೆಗಳನ್ನು ಸಲ್ಲಿಸಿದ ಕಾರಣ ಸದರಿಯವರಿಗೆ ನಿಯಮಾನುಸಾರ ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಾಲಯದಿಂದ ರಚಿತವಾದ Expert Committee ಯ ವರದಿಯಂತೆ ಗಣಿ ಕಾರ್ಯಕೈಗೊಳ್ಳಲು ಅನುಮತಿ ನೀಡಲಾಗಿದೆ. |
| (ಇ) | ಸರ್ಕಾರದ ಉತ್ತರದಲ್ಲಿ ತಿಳಿಸಿರುವಂತೆ ಈ ಕಾರ್ಯವು ಸರ್ವೋಚ್ಚ ನ್ಯಾಯಾಲಯದ / ಪುರಾತತ್ವ ಇಲಾಖೆಯ ನಿಯಮಗಳ ಉಲ್ಲಂಘನೆಯಾಗುವುದಿಲ್ಲವೇ; ಈ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | |

| | | |
|---|---|---|
| | | ಇನ್ನೊಂದು ಪ್ರಕರಣದಲ್ಲಿ ಮೆII MSPL ರವರು ಹರಾಜಿನಲ್ಲಿ ಪಡೆದ **'ಸಿ'** ವರ್ಗದ ಗಣಿ ಗುತ್ತಿಗೆ (M/s. Karthikeyas Manganese & Iron Ore Ltd.,) ಸಂಬಂಧಿಸಿದಂತೆ ಶಾಸನಬದ್ಧ ದಾಖಲೆಗಳನ್ನು ಸಲ್ಲಿಸದ ಕಾರಣ ಸದರಿ ಕಂಪನಿಗೆ ಈವರೆಗೆ ಗಣಿಗಾರಿಕೆಗೆ ಅನುಮತಿ ನೀಡಿರುವುದಿಲ್ಲ. ಉಳಿದ ಹರಾಜೇತರ ಗಣಿಗುತ್ತಿಗೆಗಳು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ನಿಯಮಾನುಸಾರ ಗಣಿಗಾರಿಕೆಯನ್ನು ನಡೆಸುತ್ತಿವೆ.<br><br>ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ(NGT) ಯಲ್ಲಿ ದಾಖಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ, ಸರ್ಕಾರದ ವತಿಯಿಂದ ಆಕ್ಷೇಪಣೆ ಮತ್ತು ಮಾಹಿತಿಯನ್ನು ಸಲ್ಲಿಸಲಾಗಿರುತ್ತದೆ. ತದನಂತರ ಇದೇ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ W.P.No:25173/2022 ರಡಿ ಪ್ರಕರಣವು ವಿಚಾರಣೆ ಹಂತದಲ್ಲಿದ್ದು ಇತ್ಯರ್ಥಕ್ಕೆ ಬಾಕಿ ಇರುವ ಕಾರಣದಿಂದಾಗಿ ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (NGT) ಪೀಠವು ದಿನಾಂಕ: 18.06.2025 ರಂದು ಪೀಠದ ಮುಂದೆ ಬಂದ ಅರ್ಜಿಯನ್ನು ವಜಾಗೊಳಿಸಿರುತ್ತದೆ. |

ಸಂಖ್ಯೆ: ಸಿಐ 35 ಎಂಎಂಎಂ 2026

**(ಎಸ್.ಎಸ್. ಮಲ್ಲಿಕಾರ್ಜುನ್)**
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು